# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 564

ಸದಸ್ಯರ ಹೆಸರು : ಶ್ರೀ ವೈ. ಎ. ನಾರಾಯಣಸ್ವಾಮಿ

ಉತ್ತರಿಸಬೇಕಾದ ದಿನಾಂಕ : 09-03-2020

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಒಂದು ವರ್ಷದಿಂದ ಪ್ರಾಥಮಿಕ ಶಾಲೆಯಿಂದ ಹಿಡಿದು ಪದವಿ ಪೂರ್ವ ಕಾಲೇಜಿನವರೆಗೆ ತಿಂಗಳಿಗೆ ಸರಿಯಾಗಿ ವೇತನ ಬಟವಾಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದಕ್ಕೆ ಕಾರಣಗಳೇನು: | ಬಂದಿದೆ.<br><br>1] ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ವೇತನ ಪಡೆಯುತ್ತಿರುವ ಶಿಕ್ಷಕರ ಮತ್ತು ಸಿಬ್ಬಂದಿಗಳ ವೇತನವನ್ನು ಈ ಸಾಲಿನಲ್ಲಿ ಖಜಾನೆ-2 ವ್ಯವಸ್ಥೆಯಡಿ ಪಾವತಿಗೆ ಕ್ರಮವಹಿಸಲಾಗುತ್ತಿತ್ತು. ಆದುದರಿಂದ ಶಿಕ್ಷಕರ ಬ್ಯಾಂಕ್ ವಿವರಗಳನ್ನು, ಖಜಾನೆ-1 ರಿಂದ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸುವ ಹಂತದಲ್ಲಿ ಕೆಲವು ತಾಂತ್ರಿಕ ತೊಂದರೆಯಿಂದಾಗಿ ವೇತನ ಪಾವತಿಯಲ್ಲಿ ವಿಳಂಬವಾಗಿರುತ್ತದೆ.<br><br>2] ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಅಕ್ಟೋಬರ್ ಮಾಹೆಯವರೆಗೆ ಸರಿಯಾಗಿ ವೇತನ ಬಟವಾಡೆ ಮಾಡಲಾಗಿದೆ. ಅಕ್ಟೋಬರ್ ಮಾಹೆಯಿಂದ ಖಜಾನೆ-2 ವ್ಯವಸ್ಥೆಯಡಿ ವೇತನ ಪಾವತಿಗೆ |

| | | |
|---|---|---|
| | | ಕ್ರಮ ಕೈಗೊಳ್ಳಲಾಗಿದ್ದು, ಪ್ರಾರಂಭಿಕ ಮಾಹೆಗಳಲ್ಲಿ ತಾಂತ್ರಿಕ ಮಾರ್ಪಾಡುಗಳು, ಇಂದೀಕರಣ, ಆಯವ್ಯಯ ಮರುಹೊಂದಾಣಿಕೆ ಹಾಗೂ ಇತರೆ ತಾಂತ್ರಿಕ ಕಾರಣಗಳಿಂದ ಮೊದಲ 2 ಮಾಹೆಗಳ ವೇತನ ಬಟವಾಡೆ ವಿಳಂಬವಾಗಿದ್ದು, ನಂತರದ ಮಾಹೆಗಳಲ್ಲಿ ಸರಿಯಾಗಿ ವೇತನ ಪಾವತಿಯಾಗುತ್ತಿದೆ.<br><br>3] 2019-20ನೇ ಸಾಲಿನ ಅನುದಾನದಲ್ಲಿ 2018-19ನೇ ಸಾಲಿನ ವೇತನ ಬಾಕಿಗಳನ್ನು ಡ್ರಾ ಮಾಡಿದ್ದರಿಂದ ಅನುದಾನ ಕೊರತೆ ಉಂಟಾಗಿದ್ದು, ಹೆಚ್ಚುವರಿ ಅನುದಾನ ಒದಗಿಸುವ ಮೂಲಕ ಸರಿಪಡಿಸಿದೆ.<br><br>4] ಸರ್ಕಾರದಿಂದ ಅನುದಾನ ಬಿಡುಗಡೆ ಆದ ನಂತರ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಹಂತದಲ್ಲಿ ವೇತನ ಬಿಲ್ಲುಗಳನ್ನು ಸಿದ್ಧಪಡಿಸುವುದು, ಮೇಲುಸಹಿ ಮಾಡುವ ಹಂತದಲ್ಲಿ ಹಾಗೂ ಖಜಾನೆ-2 ತಂತ್ರಾಂಶದಲ್ಲಿ ಅಳವಡಿಸುವಿಕೆಯಲ್ಲಿ ಉಂಟಾದ ತೊಂದರೆಗಳಿಂದ ಸಹ ವೇತನ ಪಾವತಿ ವಿಳಂಬವಾಗಿರುತ್ತದೆ. |
| (ಆ) | ಪ್ರತಿ ತಿಂಗಳು 5ನೇ ತಾರೀಖಿನ ಒಳಗೆ ವೇತನ ಬಟವಾಡೆ ಮಾಡಲು ಇರುವ ತೊಂದರೆ ಏನು: | ರಾಜ್ಯದ ಕೆಲವೊಂದು ಜಿಲ್ಲೆ/ತಾಲ್ಲೂಕುಗಳಲ್ಲಿ ಅನುದಾನದ ಕೊರತೆಯಿಂದಾಗಿ 2019-20ನೇ ಸಾಲಿನಲ್ಲಿ ಪ್ರತೀ ತಿಂಗಳು ವೇತನ ಕ್ರಮವಾಗಿ ಆಗಿರುವುದಿಲ್ಲ. ವೇತನ ಅನುದಾನ ಲಭ್ಯವಿರುವ ಎಲ್ಲಾ ಜಿಲ್ಲೆ/ತಾಲ್ಲೂಕುಗಳಲ್ಲಿ ನಿಗದಿತ ಕಾಲಾವಧಿಯೊಳಗಾಗಿ ವೇತನ ಪಾವತಿ ಆಗುತ್ತಿರುತ್ತದೆ. |
| (ಇ) | ಈ ತೊಂದರೆ ನಿವಾರಣೆಗೆ ಶಾಶ್ವತ ಪರಿಹಾರವೇನು?ನು | 1] ಪ್ರಸ್ತುತ ಆರ್ಥಿಕ ಇಲಾಖೆಯಿಂದ ತಾಲ್ಲೂಕು ಪಂಚಾಯತಿಗಳಿಗೆ ಶಿಕ್ಷಕರ ವೇತನಾನುದಾನವನ್ನು ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ. ಒಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಒಂದು ತಾಲ್ಲೂಕು ಪಂಚಾಯತಿಯಲ್ಲಿ ಹೆಚ್ಚುವರಿಯಾದ |

| | | |
|---|---|---|
| | | ವೇತನಾನುದಾನವನ್ನು, ವೇತನಾನುದಾನದ ಕೊರತೆ ಇರುವ ಮತ್ತೊಂದು ತಾಲ್ಲೂಕು ಪಂಚಾಯತಿಗೆ ಮರುಹೊಂದಾಣಿಕೆ ಮಾಡಲು ಸಾಧ್ಯವಾಗದ ಕಾರಣ ಈ ತೊಂದರೆಯನ್ನು ಪರಿಹರಿಸಲು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಲಾಗಿ, ಮುಂದಿನ 2020-21ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡುವ ವೇತನಾನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಒಟ್ಟಾರೆಯಾಗಿ ಅನುದಾನ ಬಿಡುಗಡೆ ಮಾಡಿ ಜಿಲ್ಲಾ ಪಂಚಾಯತಿಗಳು ನಂತರ ಸಂಬಂಧಿಸಿದ ತಾಲ್ಲೂಕು ಪಂಚಾಯತಿಗಳಿಗೆ ವಾಸ್ತವಿಕ ಬೇಡಿಕೆಗೆ ಅನುಗುಣವಾಗಿ ವೇತನಾನುದಾನವನ್ನು ಮರುಹಂಚಿಕೆ ಮಾಡಲು ಆರ್ಥಿಕ ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ ಇದರಿಂದ ಇನ್ನುಮುಂದೆ ವೇತನಾನುದಾನದ ಕೊರತೆ ಉದ್ಭವಿಸದಂತೆ ಕ್ರಮವಹಿಸಿ ಸಕಾಲದಲ್ಲಿ ವೇತನ ಪಾವತಿಸಲು ಅನುಕೂಲವಾಗುತ್ತದೆ.<br><br>2) 2019-20ನೇ ಸಾಲಿನಲ್ಲಿ ಶಿಕ್ಷಕರ ವೇತನ ವೆಚ್ಚಗಳಿಗೆ ಆಯವ್ಯಯದಲ್ಲಿ ರೂ 14563.26 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ ಹೆಚ್ಚುವರಿಯಾಗಿ ರೂ 680.39 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>3) ಈಗಾಗಲೇ 2019-20ನೇ ಸಾಲಿನಲ್ಲಿ ಖಜಾನೆ-2 ತಂತ್ರಾಂಶದಲ್ಲಿ ಅಗತ್ಯ ಮಾಹಿಗಳು ಹಾಗೂ ಅನುಮತಿಗಳ ಅಳವಡಿಕೆ ಆಗಿರುವುದರಿಂದ, ಮುಂದಿನ ಸಾಲಿನಲ್ಲಿ ತಾಂತ್ರಿಕ ಅಡಚಣೆಗಳು ಸಂಭವಿಸುವ ಸಾಧ್ಯತೆ ಕಡಿಮೆಯಿದೆ. |

| | | |
|---|---|---|
| | | 4) ಬಿಡುಗಡೆಯಾಗುವ ವೇತನಾನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ವೇತನಾನುದಾನದ ಕೊರತೆ ಉಂಟಾಗದಂತೆ ಕ್ರಮವಹಿಸಲು ದಿನಾಂಕ:29.08.2019 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. (ಅನುಬಂಧ-1) |

ಇಪಿ 56 ಯೋಯೋಕ 2020

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ

ಸಕಾಲ ಸಚಿವರು

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-01

ದಿನಾಂಕ:29-08-2019

ಸಂಖ್ಯೆ: ಆಯವ್ಯಯ:ಅನು.ಬೇ/ವೇ.ಪಾ/2019-20/**309223**

**: : ಸುತ್ತೋಲೆ : :**

**ವಿಷಯ: ಜಿಲ್ಲಾ ಪಂಚಾಯತ್/ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಮತ್ತು ಅವುಗಳ ವ್ಯಾಪ್ತಿಗೆ ಬರುವ ಅಧಿಕಾರಿ/ಸಿಬ್ಬಂದಿಗಳ ವೇತನ ವೆಚ್ಚಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆ.**

**ಉಲ್ಲೇಖ: ವಿಶೇಷಾಧಿಕಾರಿಗಳು(ಜಿ.ಪಂ), ಆರ್ಥಿಕ ಇಲಾಖೆ ಇವರ ಪತ್ರ ಸಂಖ್ಯೆ: ಆಇ 321 ವೆಚ್ಚ 6/2019 ದಿನಾಂಕ:29.05.2019.**

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ವಿಧಾನ ಪರಿಷತ್ತಿನ ಶಿಕ್ಷಕರ/ಪದವೀಧರ ಕ್ಷೇತ್ರಗಳನ್ನು ಪ್ರತಿನಿಧಿಸುವ ಮಾನ್ಯ ಸದಸ್ಯರುಗಳು ಹಾಗೂ ಹಲವು ಜನಪ್ರತಿನಿಧಿಗಳು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರುಗಳಿಗೆ ವೇತನವನ್ನು ಸುಮಾರು 3-4 ತಿಂಗಳುಗಳಿಂದ ನೀಡಿರುವುದಿಲ್ಲ ಎಂಬ ಬಗ್ಗೆ ವಿಷಾದ ವ್ಯಕ್ತಪಡಿಸಿರುತ್ತಾರೆ. ಈ ಬಗ್ಗೆ ಪ್ರತಿ ತಿಂಗಳು ಶಿಕ್ಷಕರ ವೇತನವನ್ನು ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಆಯಾ ತಿಂಗಳ ಕೊನೆಯ ದಿನಾಂಕದೊಳಗೆ ಪಾವತಿಸುವ ಬಗ್ಗೆ ಅಗತ್ಯ ಕ್ರಮ ವಹಿಸಲು ಈಗಾಗಲೇ ಹಲವಾರು ಬಾರಿ ಸೂಚನೆ ನೀಡಲಾಗಿತ್ತು.

ಪ್ರತಿ ವರ್ಷದ ಆಯವ್ಯಯದಲ್ಲಿ ಕೇವಲ ಕಾರ್ಯನಿರತ ಸಿಬ್ಬಂದಿಯ 12 ಮಾಹೆಯ ವೇತನಾನುದಾನವನ್ನು ಮಾತ್ರ ನಿಗದಿಪಡಿಸಲಾಗಿರುತ್ತದೆ. ಇದಕ್ಕೆ ಹೊರತಾಗಿ ಬೇರೆ ಇನ್ನಾವುದೇ ಬಾಕಿ ವೇತನಕ್ಕಾಗಲಿ ಅನುದಾನವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವುದಿಲ್ಲ. ಒಂದು ವೇಳೆ ಯಾವುದೇ ಸಿಬ್ಬಂದಿ/ಅಧಿಕಾರಿಯ ಬಾಕಿ ವೇತನ ಪಾವತಿಸಬೇಕಾದಲ್ಲಿ ಅಂತಹ ಪ್ರಕರಣಗಳನ್ನು ಸರ್ಕಾರಕ್ಕೆ ಸಲ್ಲಿಸಿ ಅನುದಾನ ಬಿಡುಗಡೆ ಆದ ನಂತರ ಮಾತ್ರ ಬಾಕಿ ವೇತನವನ್ನು ಸೆಳೆಯಬೇಕಾಗಿದ್ದು, ಅನ್ಯಥಾ ಕೇವಲ ಪ್ರತಿ ಮಾಹೆಯ ವೇತನವನ್ನು ಮಾತ್ರ ಸೆಳೆಯಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು ವೇತನ ಪಾವತಿ ಬಗ್ಗೆ ಅಗತ್ಯ ಕ್ರಮ ವಹಿಸಿ ತಮ್ಮ ಅಧೀನದಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು, ಮುಖ್ಯಶಿಕ್ಷಕರುಗಳು ಸಿಬ್ಬಂದಿಗಳ ವೇತನ/ವೇತನೇತರ ವೆಚ್ಚಗಳಿಗೆ ಅನುದಾನದ ಕೊರತೆ ಇದ್ದಲ್ಲಿ ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಈಗಾಗಲೇ ಸೂಚಿಸಲಾಗಿತ್ತು.

ಅದರಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶಿಕ್ಷಕರ/ಅಧಿಕಾರಿಗಳು/ಸಿಬ್ಬಂದಿಗಳ ವೇತನಕ್ಕಾಗಿ ಕೊರತೆ/ಹೆಚ್ಚುವರಿ ಅಗತ್ಯವಿರುವ ಅನುದಾನದ ಮಾಹಿತಿಯನ್ನು ಲೆಕ್ಕ ಶೀರ್ಷಿಕೆವಾರು ಸಲ್ಲಿಸಲಾಗಿದ್ದು, ಸಲ್ಲಿಸಲಾದ ಬೇಡಿಕೆಗಳನ್ನು ಪರಿಶೀಲಿಸಲಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕೊರತೆ ಇರುವ ಬೇಡಿಕೆ ಮೊತ್ತ 1190.00 ಕೋಟಿಗಳಾಗಿರುತ್ತದೆ. ಈ ಹೆಚ್ಚುವರಿ ಬೇಡಿಕೆಗೆ ಯಾವುದೇ ಸಮರ್ಥನೆ ನೀಡದೆ ಕೇವಲ ಅನುದಾನ ಕೊರತೆ ಎಂದು ಹೇಳಲಾಗಿದೆ. ಆದರೆ ಯಾವ ಕಾರಣದಿಂದ ಅನುದಾನ ಕೊರತೆ ಆಗಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಇಷ್ಟು ದೊಡ್ಡ ಮೊತ್ತದ ಕೊರತೆಯ ಅನುದಾನವನ್ನು ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಾಧ್ಯವಿರುವುದಿಲ್ಲ. ಏಕೆಂದರೆ ಪ್ರತಿ ವರ್ಷ ಆಯವ್ಯಯದಲ್ಲಿ ಇಲಾಖಾವಾರು ಅನುದಾನದ ಹಂಚಿಕೆಯು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಹೆಚ್.ಆರ್.ಎಂ.ಎಸ್ ತಂತ್ರಾಂಶದ ಮೂಲಕ ಸೆಳೆಯುವ ವೇತನವನ್ನು ಆಧರಿಸಿರುತ್ತದೆ. ಪ್ರತಿ ವರ್ಷ ವೇತನಕ್ಕಾಗಿ ನಿಗದಿಪಡಿಸಲಾಗಿರುವ ಅನುದಾನವನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಯಾವುದೇ ಪೂರ್ವಾನುಮತಿ ಇಲ್ಲದೇ ಬಳಸಿಕೊಳ್ಳಲಾಗುತ್ತಿರುವುದನ್ನು ಗಮನಿಸಲಾಗಿದೆ.

- **ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಹಾಗೂ ನಿಯೋಜನೆ ಮಾಡಿಕೊಂಡಾಗ.**
- **ಅಧಿಕಾರಿಗಳು/ಸಿಬ್ಬಂದಿಗಳ ಹಿಂದಿನ ಅವಧಿಗಳ ಬಾಕಿ ವೇತನವನ್ನು ಸೆಳೆಯಬೇಕಾಗಿ ಬರುವ ಪ್ರಕರಣಗಳು.**
- **ವರ್ಷಂಪೂರ್ತಿ ವೇತನಕ್ಕಾಗಿ ನಿಗದಿಪಡಿಸಲಾಗಿರುವ ಅನುದಾನವನ್ನು ವೇತನೇತರ ವೆಚ್ಚಗಳಿಗಾಗಿ ಅಂದರೆ ಬಾಕಿ ವೇತನ/ಗಳಿಕೆ ರಜೆ ನಗದೀಕರಣ/ವೈದ್ಯಕೀಯ ವೆಚ್ಚ ಮರುಪಾವತಿ/ನಿವೃತ್ತಿ ನಂತರ ಗಳಿಕೆ ರಜೆ ನಗದೀಕರಣ ಮುಂತಾದ ಇತರೆ ವೆಚ್ಚಗಳಿಗಾಗಿ ಬಳಸಿಕೊಳ್ಳುತ್ತಿರುವುದು.**
- **ವರ್ಗಾವಣೆ ಹೊಂದಿದ ನೌಕರರಿಗೂ ಮೂಲ ಕಛೇರಿಯಲ್ಲಿಯೇ ಬಾಕಿ ವೇತನವನ್ನು ಸೆಳೆಯುವುದರಿಂದ.**
- **ನಿರೀಕ್ಷಣಾ ಅವಧಿಯಲ್ಲಿನ ಅಧಿಕಾರಿ/ಸಿಬ್ಬಂದಿಗಳ ವೇತನವನ್ನು ಏಕಕಾಲದಲ್ಲಿ ಸೆಳೆಯುವ ಸಂದರ್ಭಗಳು.**
- **ಅಮಾನತ್ತು ಪ್ರಕರಣಗಳಿಗೆ ವೇತನ/ವೇತನೇತರ ವೆಚ್ಚಗಳನ್ನು ಸೆಳೆಯುವ ಪ್ರಕರಣಗಳು.**

ಈ ಮೇಲ್ಕಂಡ ಎಲ್ಲಾ ಪ್ರಕರಣಗಳಿಗೆ ಹಾಗೂ ಇದೇ ರೀತಿಯ ವೇತನೇತರ ವೆಚ್ಚಗಳಿಗಾಗಿ ಪ್ರತಿ ಮಾಹೆಯ ವೇತನಕ್ಕಾಗಿ ನಿಗದಿಪಡಿಸಿರುವ ಅನುದಾನದಲ್ಲಿ ಬಳಸಿಕೊಳ್ಳುವುದರಿಂದ ಪ್ರತಿ ತಿಂಗಳು ವೇತನಕ್ಕಾಗಿ ನಿಗದಿಪಡಿಸಿರುವ ಅನುದಾನದಲ್ಲಿ ಕೊರತೆಯಾಗುತ್ತಿರುವುದನ್ನು ಗಮನಿಸಿದೆ. ಈ ಹಿನ್ನೆಲೆಯಲ್ಲಿ ಮಾಸಿಕ ವೇತನಕ್ಕಾಗಿ ನಿಗದಿಯಾದ ಅನುದಾನದಲ್ಲಿ ಯಾವುದೇ ಬಾಕಿ ವೇತನವನ್ನು ಸೆಳೆಯಬಾರದೆಂದು ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಿದೆ. ಬಾಕಿ ವೇತನಕ್ಕೆ ಅಗತ್ಯವಿರುವ ಹೆಚ್ಚುವರಿ ಅನುದಾನದ ಬೇಡಿಕೆಗೆ ಪ್ರಸ್ತಾವನೆ ಸಲ್ಲಿಸುವಾಗ ಸೂಕ್ತ ಕಾರಣ ಹಾಗೂ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದೆ.

---2

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳು ಮತ್ತು ಅವುಗಳ ವ್ಯಾಪ್ತಿಗೆ ಬರುವ ಅಧಿಕಾರಿ/ಸಿಬ್ಬಂದಿಗಳ ವೇತನ ವೆಚ್ಚಕ್ಕಾಗಿ ಕೊರತೆ/ಹೆಚ್ಚುವರಿ ಅನುದಾನಕ್ಕಾಗಿ ಬೇಡಿಕೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಇಂತಹ ಅಪೂರ್ಣ/ಸ್ಪಷ್ಟೀಕರಣಗಳಿಲ್ಲದ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯಿಂದ ತಿರಸ್ಕರಿಸಲಾಗುತ್ತಿದೆ.

**ಆದುದರಿಂದ ಈ ಮೂಲಕ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು/ಕ್ಷೇತ್ರ ಶಿಕ್ಷಣಾಧಿಕಾರಿಗಳು/ಸಂಬಂಧಿಸಿದ ಡಿಡಿಓಗಳು ತಮ್ಮ ವ್ಯಾಪ್ತಿಯ ಅಧಿಕಾರಿಗಳು/ಸಿಬ್ಬಂದಿಗಳಿಗೆ ಅಗತ್ಯವಿರುವ ಲೆಕ್ಕ ಶೀರ್ಷಿಕೆವಾರು ನಿಗದಿಪಡಿಸಲಾದ ವೇತನ ವೆಚ್ಚಗಳಲ್ಲಿ ಕೇವಲ ಪ್ರತಿ ತಿಂಗಳ ವೇತನಕ್ಕಾಗಿ ಮಾತ್ರ ಸೆಳೆಯತಕ್ಕದ್ದು. ಉಳಿದಂತೆ ವೇತನೇತರ ವೆಚ್ಚಗಳಿಗೆ ಆಯಾ ಲೆಕ್ಕ ಶೀರ್ಷಿಕೆವಾರು ಪೂರ್ಣ ಹಾಗೂ ಸ್ಪಷ್ಟ ಮಾಹಿತಿಯೊಂದಿಗೆ ಆಯುಕ್ತಾಲಯಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನಾಧರಿಸಿ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿಕೊಂಡ ನಂತರವೇ ಸದರಿ ವೆಚ್ಚಗಳನ್ನು ಭರಿಸಿಕೊಳ್ಳತಕ್ಕದ್ದು.**

ಮುಂದುವರೆದು, ಇನ್ನು ಮುಂದೆ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿಗಳು ಮತ್ತು ಅವುಗಳ ವ್ಯಾಪ್ತಿಗೆ ಬರುವ ಅಧಿಕಾರಿ/ಸಿಬ್ಬಂದಿಗಳ ವೇತನ ವೆಚ್ಚಕ್ಕಾಗಿ ಕೊರತೆ/ಹೆಚ್ಚುವರಿ ಅನುದಾನಕ್ಕಾಗಿ ಬೇಡಿಕೆ ಪ್ರಸ್ತಾವನೆಗಳನ್ನು ಸಲ್ಲಿಸುವಾಗ **ಉಲ್ಲೇಖಿತ ಸುತ್ತೋಲೆಯಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಮಾದರಿ ನಮೂನೆಗಳಲ್ಲಿಯೇ ಸಲ್ಲಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.** ಉಲ್ಲೇಖಿತ ಆದೇಶದ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿದೆ.

ಇನ್ನು ಮುಂದೆ ಶಿಕ್ಷಕರ ವೇತನ ಪಾವತಿ ವಿಚಾರದಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ನೀಡದಂತೆ ಡಿ.ಡಿ.ಓ.ಗಳು ಎಚ್ಚರ ವಹಿಸುವುದು. ತಮ್ಮ ಅಧೀನದಲ್ಲಿ ಬರುವ ಎಲ್ಲಾ ಶಿಕ್ಷಕರ/ಸಿಬ್ಬಂದಿಯವರ ಬಿಲ್ಲುಗಳನ್ನು **HRMS** ತಂತ್ರಾಂಶದಲ್ಲಿ ಸಿದ್ಧಪಡಿಸಿ, ನಿಗದಿತ ಸಮಯದಲ್ಲಿ ಖಜಾನೆಗಳಿಗೆ ಸಲ್ಲಿಸಿ ವೇತನ ಪಾವತಿಸಿದ ವಿವರಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆ-1 & 2 ರಲ್ಲಿ **ಕ್ಷೇತ್ರಶಿಕ್ಷಣಾಧಿಕಾರಿಗಳು/ವ್ಯವಸ್ಥಾಪಕರು ಧೃಡೀಕರಿಸಿ** ಒಂದು ಪ್ರತಿಯನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ಪ್ರತಿ ತಿಂಗಳ **8 ನೇ ದಿನಾಂಕ** ದೊಳಗೆ ಕಡ್ಡಾಯವಾಗಿ ಕಳುಹಿಸುವುದು.

ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಪಡೆದ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ, ಕ್ರೋಢೀಕರಿಸಿ ಆಯುಕ್ತರ ಕಛೇರಿಗೆ **caocpibng@gmail.com** ಗೆ ಪ್ರತಿ ತಿಂಗಳ **10ನೇ ದಿನಾಂಕ** ದೊಳಗೆ ಕಡ್ಡಾಯವಾಗಿ ಕಳುಹಿಸುವುದು. ಈ ಎಲ್ಲಾ ಕ್ರಮಗಳ ನಂತರವೂ ವೇತನ ಬಿಡುಗಡೆಯಲ್ಲಿ ಯಾವುದೇ ವಿಳಂಬವಾದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು/ಸಿಬ್ಬಂದಿಗಳಿಗೆ ಪ್ರತಿ ತಿಂಗಳ ವೇತನಕ್ಕೆ ಅನುದಾನ ಕೊರತೆ ಇರದ ಹಾಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ವೈಯುಕ್ತಿಕ ಗಮನ ಹರಿಸಿ ಇನ್ನು ಮುಂದೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಅಗತ್ಯ ಕ್ರಮ ವಹಿಸುವುದು.

2019-20 ನೇ ಸಾಲಿಗೆ ಜಿಲ್ಲಾ ಕಛೇರಿಗಳಿಂದ ಸ್ವೀಕರಿಸಲಾದ ಹೆಚ್ಚುವರಿ ಅನುದಾನ ಬೇಡಿಕೆಗೆ ಸಂಬಂಧಿಸಿದಂತೆ ಪ್ರಥಮ ಹಂತವಾಗಿ ಜಿಲ್ಲಾ ವ್ಯಾಪ್ತಿಯಲ್ಲಿ ಉಳಿಕೆಯಾಗುವ ಅನುದಾನವನ್ನು ಜಿಲ್ಲೆಯಲ್ಲಿನ ಕೊರತೆ ಇರುವ ಇನ್ನಿತರೆ ತಾಲ್ಲೂಕುಗಳಿಗೆ ಮರುಹೊಂದಾಣಿಕೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಗೂ ಅನುದಾನದ ತೀವ್ರ ಕೊರತೆ ಇರುವ ಜಿಲ್ಲೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಸಹ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಇದರ ಪ್ರತಿಗಳನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿದೆ. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳ ಲೆಕ್ಕ ಶೀರ್ಷಿಗಳಲ್ಲಿ ಆಯವ್ಯಯದಲ್ಲಿ ನಿಗದಿಯಾಗಿರುವ ಅನುದಾನ ಹಾಗೂ ಪ್ರಸ್ತುತ ಮರುಹೊಂದಾಣಿಕೆ ಹಾಗೂ ಹೆಚ್ಚುವರಿ ಅನುದಾನದ ಪ್ರಸ್ತಾನವೆಯಲ್ಲಿನ ಅನುದಾನಗಳನ್ನು ಗಣನೆಗೆ ತೆಗೆದುಕೊಂಡು ಇದರ ನಂತರವೂ ಸಹ ಪ್ರತಿ ಲೆಕ್ಕ ಶೀರ್ಷಿಕೆವಾರು ಅಗತ್ಯವಾಗುವ ಹೆಚ್ಚುವರಿ ಅನುದಾನವನ್ನು ಉಲ್ಲೇಖಿತ ಸುತ್ತೋಲೆಯಲ್ಲಿನ ಮಾರ್ಗದರ್ಶನದ ಅನುಸಾರ ನಿಗದಿತ ನಮೂನೆಯಲ್ಲಿ ಹೆಚ್ಚುವರಿ ಬೇಡಿಕೆ ಸಲ್ಲಿಸುವುದು. ಈ ರೀತಿ ಅಗತ್ಯವಿರುವ ಹೆಚ್ಚುವರಿ ಬೇಡಿಕೆಯನ್ನು ದಿನಾಂಕ: 11.09.2019 ರ ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು.

3/9/19

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು,

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ.
2. ಕಛೇರಿ ಪ್ರತಿ.

D:\D\Teachers salary\Teachers Salary Circular.docx